# ಭೋಜಪತ್ರ ನೆನಪಿಸಿದ ಹಿಮಾಲಯ ಚಾರಣ

■ ಬಿ. ಸತ್ಯನಾರಾಯಣ ಅರಸ



ಇತ್ತೀಚೆಗೆ ನಮ್ಮ ಮನೆಯ ಪುಟ್ಟ ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ಒಪ್ಪ ಓರಣ ಮಾಡುತ್ತಿದ್ದೆ. ಆಗ ನನ್ನ ಕೈಬರಹದ ಈ ಪುಸ್ತಕವನ್ನು ಇನ್ನೊಮ್ಮೆ ಓದಿದೆ. ಸುಮಾರು 35 ವರ್ಷಗಳ ಹಿಂದೆ ಅಂದರೆ 1984ರಲ್ಲಿ ನಾನು ಹಿಮಾಲಯ ಚಾರಣವನ್ನು ಮುಗಿಸಿ ಬಂದ ನಂತರ ಹಿಮಾಲಯದ ಕಾಡಿನಿಂದ ತಂದ ಭೋಜಪತ್ರಗಳ ಮೇಲೆ 'ಹಿಮಾಲಯ ಚಾರಣ'ದ ಅನುಭವವನ್ನು ಬರೆದಿಟ್ಟ ಪುಸ್ತಕವಿದು. ಈ ಬರಹವನ್ನು ಓದುತ್ತಾ ಓದುತ್ತಾ ನಾನು ಆ ಕಾಲದಲ್ಲಿ ಅನುಭವಿಸಿದ ಸಂತಸವನ್ನು ಪುನಃ ಅನುಭವಿಸತೊಡಗಿದೆ.

ಕರಾವಳಿ ತೀರದಲ್ಲಿ ಹುಟ್ಟಿ ಬೆಳೆದ ನನಗೆ ಸಮುದ್ರದ ಒಡನಾಟ, ಮರಳಿನ ಮೇಲಿನ ತಿರುಗಾಟ ಅಭ್ಯಾಸವಾಗಿತ್ತು. ಕಾಲು ಬಲಿತ ಮೇಲೆ ಹತ್ತಿರದ ಪಶ್ಚಿಮಘಟ್ಟದ ಶಿಖರಗಳ ಆಕರ್ಷಣೆಯಿಂದ ಅವುಗಳ ಮೇಲಿನ ಓಡಾಟವನ್ನು ಹವ್ಯಾಸ ಮಾಡಿಕೊಂಡೆ. 7080ರ ದಶಕದಲ್ಲಿ ಚಾರಣಕ್ಕೆ ಹೋಗುವವರ ಸಂಖ್ಯೆ ಕಡಿಮೆ ಹಾಗೆಯೇ ಚಾರಣವನ್ನು ಆಯೋಜಿಸುವ ಸಂಸ್ಥೆಗಳೂ ಕಡಿಮೆ ಪ್ರಮಾಣದಲ್ಲಿದ್ದವು. ಕರಾವಳಿಯ ನಾನು ಹಾಗೂ ನನ್ನ ಕೆಲವು ಸಮಾನ ಮನಸ್ಕ ಸ್ನೇಹಿತರು ಪಶ್ಚಿಮಘಟ್ಟಗಳಲ್ಲಿ ಸಾಕಷ್ಟು ಚಾರಣ ಮಾಡಿ ಅನುಭವ ಪಡೆದಿದ್ದೆವು. ಆದರೆ ಹಿಮಾಲಯ?

ಆ ಕಾಲದಲ್ಲಿ ಅದೊಂದು ನಮ್ಮ ಪಾಲಿನ ಮರೀಚಿಕೆ. ಕೇವಲ ಸಿನಿಮಾಗಳಲ್ಲಿ ನೋಡಬಹುದಾದ, ಪತ್ರಿಕೆಗಳಲ್ಲಿ ಓದಬಹುದಾದ ವಿಷಯ ಅಷ್ಟೆ. ಯೂತ್ ಹಾಸ್ಟೆಲ್‌ನವರು ಹಿಮಾಲಯ ಚಾರಣವನ್ನು ಪ್ರತಿವರ್ಷ ಆಯೋಜಿಸುತ್ತಿರುವ ವಿಷಯ ತಿಳಿದಿದ್ದು ಕಡೂರಿನಲ್ಲಿ ಉದ್ಯೋಗದಲ್ಲಿದ್ದಾಗ. ಆಗ ನಾನು ಚಿಕ್ಕಮಗಳೂರಿನ ಯೂತ್ ಹಾಸ್ಟೆಲ್ ಘಟಕದ ಸದಸ್ಯನಾದೆ. 1984ರ ಮೇ ಜೂನ್ ನಲ್ಲಿ ಆಯೋಜಿಸಿದ 'ರಾಷ್ಟ್ರೀಯ ಹಿಮಾಲಯ ಚಾರಣ' ಕಾರ್ಯಕ್ರಮದಲ್ಲಿ ಸೇರಿಕೊಳ್ಳಲು ಚಿಕ್ಕಮಗಳೂರು ಘಟಕದಿಂದ ನನಗೆ ಮತ್ತು ನನ್ನ ಸ್ನೇಹಿತನಾದ ಶಶಿಧರನಿಗೆ ಆಹ್ವಾನ ಬಂತು. ಇದು ನಮಗೆ ಒಂದು ಅಪೂರ್ವ ಅವಕಾಶವಾಗಿತ್ತು. ಆದ್ದರಿಂದ ನಾವಿಬ್ಬರೂ ಈ ಕಾರ್ಯಕ್ರಮದಲ್ಲಿ ಭಾಗಿಯಾಗಲು ಹೆಸರು ನೊಂದಾಯಿಸಿಕೊಂಡೆವು.

1984ರ ಮೇ 27ರಂದು ಬೆಂಗಳೂರಿನಿಂದ ರೈಲಿನಲ್ಲಿ ಚೆನ್ನೈ (ಅಂದಿನ ಮದ್ರಾಸ್)ಗೆ ಹೋಗಿ ಅಲ್ಲಿಂದ ರೈಲಿನಲ್ಲಿ ನವದೆಹಲಿ ತಲುಪಿದೆವು. ಅಲ್ಲಿಂದ ಬಸ್ಸಿನಲ್ಲಿ ಚಂಡೀಗಡದ ಮೂಲಕ ಮನಾಲಿ ಬಸ್ಸಿನಲ್ಲಿ ಪ್ರಯಾಣಿಸಿ ನಮ್ಮ ಮೂಲ ಶಿಬಿರವಿರುವ ಎರ್ಸನ್ ತಲುಪಿದೆವು. ಅಲ್ಲಿ ಎರಡು ದಿವಸ ಓಡುವುದು, ಬೆಟ್ಟವನ್ನು ಹತ್ತುವ ಇಳಿಯುವ ರೀತಿ, ಹಗ್ಗದ ಸಹಾಯದಿಂದ ಬಂಡೆಯನ್ನು ಹತ್ತುವುದು ಹಾಗೂ ಇಳಿಯುವುದು, ನದಿಯ ಎರಡೂ ಕಡೆ ಕಟ್ಟಿದ ಹಗ್ಗವನ್ನು ಹಿಡಿದುಕೊಂಡು ನದಿಯನ್ನು ದಾಟುವುದು ಇತ್ಯಾದಿಗಳಲ್ಲಿ ನಮ್ಮನ್ನು ತರಬೇತಿಗೊಳಿಸಿದರು.

ಅಂದು ಜೂನ್ 4, 1984. ನಮ್ಮ 'ಹಿಮಾಲಯ ಪರ್ವತ ಚಾರಣ'ದ ಮೊದಲ ದಿನ. ನಮಗೆ ತುಂಬಾ ಸಂಭ್ರಮ. ಮನಸ್ಸಿನಲ್ಲಿ ಏನೋ ಖುಷಿ, ಉದ್ವೇಗ (ಎಲ್ಲಿಯ ಅರಬ್ಬೀ ಸಮುದ್ರ ಎಲ್ಲಿಯ ಹಿಮಾಲಯ!) ಮೊದಲ ದಿನ 'ಜಾನ'ದ ವರೆಗೆ ಸುಮಾರು 9 ಕಿ.ಮೀ ನಡಿಗೆ. ಎರಡನೇ ದಿನ 'ಮತಿಕೋಚರ್' ವರೆಗೆ 10 ಕಿ.ಮೀ ನಡಿಗೆ.. ಹೀಗೆ ನಡೆಯುತ್ತಾ ಹೋಗುತ್ತಿದ್ದಂತೆ ಸುಂದರ ಹಾಗೂ ವೈವಿಧ್ಯಮಯ ಪರ್ವತಗಳನ್ನು, ಬಿಯಾಸ್ ಹಾಗೂ ಅನಂತರ ಪಾರ್ವತೀ ನದಿಯ ವೈಭವದ ಕಣಿವೆಗಳನ್ನು ನೋಡುತ್ತಾ ನಡೆಯುತ್ತಿದ್ದಂತೆ ಒಂದು ವಿಭಿನ್ನ ಜಗತ್ತಿನೊಳಗೆ ಪ್ರವೇಶಿಸಿದಂತಹ ಅನುಭವ. ಚಾರಣದ 8ನೇ ದಿನವಂತೂ ಒಂದು ದಿನಪೂರ್ತಿ 'ಪದ್ರಿ' ಎನ್ನುವಲ್ಲಿ ಹಿಮದ ಮೇಲೆ ಜಾರುತ್ತಾ, ಆಟವಾಡುತ್ತಾ ಕಳೆದದ್ದು ಜೀವನದ ಅವಿಸ್ಮರಣೀಯ ಘಟನೆ.

ಅಲ್ಲದೆ ಅ ದಿನ ಪದ್ರಿಯಲ್ಲಿರುವ ಚಿಕ್ಕ ಕಾಡಿನಿಂದ 'ಭೋಜಪತ್ರ' ಮರದ ತೊಗಟೆಯನ್ನು ತಂದು ಬಿಡಿಸಿ ಹಾಳೆಗಳನ್ನಾಗಿ ಮಾಡಿದೆವು (ಛಾಯಾ ಚಿತ್ರ ಗಮನಿಸಿ). 9ನೇ ದಿನ ಹಿಮದ ಹಾಸಿನ ಮೇಲೆ ನಡೆಯುತ್ತಾ ಅದ್ಭುತವಾದ 'ಕೌಲಿ ಪಾಸ್'(ಸಮುದ್ರ ಮಟ್ಟದಿಂದ 12300 ಅಡಿ ಎತ್ತರ) ಅನ್ನು ದಾಟಿದ್ದು ಒಂದು ಅದ್ಭುತ ಗಳಿಗೆ. ಒಟ್ಟಿನಲ್ಲಿ ಈ ಚಾರಣವು ಊರಿನಿಂದ ಹೊರಟು ಊರಿಗೆ ವಾಪಸ್ಸು ಬರುವವರೆಗೂ ಅನೇಕ ಸವಿನೆನಪುಗಳ ಗುಚ್ಛವನ್ನು ನನಗೆ ಕೊಟ್ಟಿತು.

ರೈಲಿನಲ್ಲಿ ಸೂಟ್‌ಕೇಸ್‌ಗಳನ್ನು ಒಂದರ ಮೇಲೊಂದು ಜೋಡಿಸಿ ಇಸ್ಪೀಟ್ ಆಡಿದ್ದು, ನಮ್ಮ ಜೊತೆಗೆ ಹಿಂದಿ ಬಾರದ ಸ್ನೇಹಿತರೊಬ್ಬರು ಚಂಡೀಗಡದ ಹೋಟೆಲ್ ಒಂದರಲ್ಲಿ ಮೊಸರಿನ ಬೆಲೆಯನ್ನು ವಿಚಾರಿಸಿದಾಗ ಹೋಟೆಲ್‌ನವರು ದೋ (ಹಿಂದಿಯಲ್ಲಿ ಎರಡು) ಎಂದಿದ್ದನ್ನು ಇವರು ತಪ್ಪಾಗಿ ಗೋ (ಹೋಗು) ಎಂದು ಇಂಗ್ಲಿಷ್‌ನಲ್ಲಿ ಅರ್ಥೈಸಿಕೊಂಡಿದ್ದು, ಸರ್ಪದ ಹೆಡೆಯಂತಹ ಸಸ್ಯವನ್ನು ನೋಡಿದ್ದು, ಮೇಲಿನಿಂದ ಬೀಳುವ ನೀರಿನ ಶಕ್ತಿಯನ್ನು ಉಪಯೋಗಿಸಿಕೊಂಡು ಧಾನ್ಯಗಳ ಹಿಟ್ಟು ಮಾಡುವ ಯಂತ್ರವನ್ನು ನೋಡಿದ್ದು, ಸೇಬಿನ ತೋಟದಲ್ಲಿ ಸೇಬಿನ ಗಿಡದಿಂದಲೇ ಸೇಬುಗಳನ್ನು ಕೊಯ್ದು ತಿಂದಿದ್ದು, ಹಿಮಚ್ಛಾದಿತ ಪರ್ವತ ಶಿಖರಗಳಾದ ಪಾರ್ವತಿ, ಪಾಪ ಪುಣ್ಯ, ಇಂದ್ರಾಸನ ಇತ್ಯಾದಿಗಳನ್ನು ಕಣ್ತುಂಬಿಕೊಂಡದ್ದು... ಹೀಗೆ ದೊಡ್ಡ ಪಟ್ಟಿಯನ್ನು ಓದುತ್ತಾ ಆಹಾ ಸವಿನೆನಪಿನ ಸುಖವೇ ಸುಖ ಎಂದೆನಿಸಿತು.

ಪುಸ್ತಕದ ಓದು ನಿಜಕ್ಕೂ ಎಷ್ಟೊಂದು ಸಂತಸವನ್ನುಂಟು ಮಾಡುತ್ತದೆ ಅಲ್ಲವೇ? ಭೋಜಪತ್ರದ ಮೇಲಿನ ನನ್ನ ಆಗಿನ ಕಾಲದ ಹಸ್ತಾಕ್ಷರವನ್ನಂತೂ ನಾನು ಪದೇ ಪದೇ ನೋಡಿ ಕಣ್ತುಂಬಿಕೊಳ್ಳುತ್ತೇನೆ. ■